15. ವಿಷಯ : ಹಾಸನ ಜಿಲ್ಲೆ ಚನ್ನರಾಯಪಟ್ಟಣ ಹೊಳೆನರಸೀಪುರ ಮತ್ತು ಹಾಸನ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ ಚನ್ನರಾಯಪಟ್ಟಣ ಹೊಳೆನರಸೀಪುರ ತಾಲ್ಲೂಕುಗಳಲ್ಲಿ 3 ಕೋಟಿ 17 ಲಕ್ಷ ರೂ.ಗಳಿಗೆ ಜಿಲ್ಲಾ ಪಂಚಾಯತಿಯಲ್ಲಿ ಪ್ರಪೋಸಲ್ ಬಂದಿದೆ. ಸುಮಾರು 600 ರಿಂದ 700 ಅಡಿ ಬೋರ್ ಕೊರೆದರೂ ನೀರು ಬರುತ್ತಿಲ್ಲ. ಅದಕ್ಕೋಸ್ಕರ ಹೆಚ್ಚಿನ ದುಡ್ಡು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಸಮಸ್ಯಾತ್ಮಕ ಜನವಸತಿಗಳಲ್ಲಿ ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಖಾಸಗಿ ಬೋರ್‌ವೆಲ್‌ಗಳ ಸೇವೆ ಪಡೆಯುವುದು. ಸಾಗಾಣಿಕೆ ಮುಖೇನ ನೀರು ಪೂರೈಸುವುದು, ಹೈಡ್ರೋಫ್ರಾಕ್ಚರಿಂಗ್ ಗೊಳಿಸುವುದು, ದುರಸ್ಥಿ ಮತ್ತು ಪುನಃಶ್ಚೇತನ ಕಾಮಗಾರಿಗಳನ್ನು ತಕ್ಷಣ ಪೂರ್ಣಗೊಳಿಸುವುದು ಹಾಗೂ ಅನಿವಾರ್ಯವಿದ್ದಲ್ಲಿ ಮಾತ್ರ ಹೊಸ ಕೊಳವೆ ಬಾವಿಗಳನ್ನು ಕೊರೆಯುವಂತಹ ಕಾಮಗಾರಿಗಳನ್ನು ಕೈಗೊಳ್ಳಲು ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ನಿರ್ದೇಶಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಸ್ಥಾಪನೆಯಾಗಿರುವ ಕಂಟ್ರೋಲ್ ರೂಂಗಳನ್ನು ಚುರುಕುಗೊಳಿಸಿ, ದೂರು ಸ್ವೀಕೃತಿಯಾದ ಕೂಡಲೇ 24 ಗಂಟೆಯೊಳಗೆ ಸ್ಪಂದಿಸಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.

ರಾಜ್ಯ ಮಟ್ಟದಲ್ಲಿ ಸ್ಥಾಪಿಸಲಾಗಿರುವ Toll Free ಸೆಂಟರ್‌ನಲ್ಲಿ (ಸಂಖ್ಯೆ : 18004258666) ದಿನಾಂಕ : 01-03-2014 ರಿಂದ ಈ ತಹಲ್‌ವರೆವಿಗೂ 3838 ದೂರುಗಳು ಸ್ವೀಕೃತಿಯಾಗಿದ್ದು, 3387 ದೂರುಗಳಿಗೆ ಸ್ಪಂದಿಸಿ ಪರಿಹಾರ ಒದಗಿಸಲಾಗಿದೆ. ಉಳಿದವುಗಳಿಗೆ ಪರಿಹಾರ ಒದಗಿಸುವ ಪ್ರಕ್ರಿಯೆ ಆದ್ಯತೆ ಮೇಲೆ ನಡೆದಿದೆ.

ಪ್ರಸಕ್ತ ಸಾಲಿನಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್‌ಫೋರ್ಸ್ ಸಮಿತಿ ಅನುಮೋದಿತ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ. **179.00** ಕೋಟಿ ಹೆಚ್ಚುವರಿ ಅನುದಾನವನ್ನು ರಾಜ್ಯ ವಲಯದಡಿ ಬಿಡುಗಡೆ ಮಾಡಲಾಗಿದೆ.

ಈಗಾಗಲೇ ರೂ. 5.00 ಲಕ್ಷವರೆಗಿನ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ನೇರವಾಗಿ PRED ವಿಭಾಗಗಳು ಕಾಮಗಾರಿಗಳ ಅನುಷ್ಠಾನದಲ್ಲಿ ಗುಣಮಟ್ಟ ಕಾಯ್ದುಕೊಳ್ಳುವ ನಿಬಂಧನೆಗೊಳಪಟ್ಟು ಅನುಷ್ಠಾನಗೊಳಿಸಬಹುದೆಂದು ಅನುಮತಿ ನೀಡಿದೆ. ಬರಪೀಡಿತ ತಾಲ್ಲೂಕುಗಳಲ್ಲಿ

ಸ್ಥಳೀಯ ಪರಿಸ್ಥಿತಿಗನುಗುಣವಾಗಿ ತುರ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಹ ಅನುಮತಿ ನೀಡಿದೆ.

ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ನೇರವಾಗಿ PRED/RWSSD ವಿಭಾಗಗಳು, ಕಾಮಗಾರಿಗಳ ಅನುಷ್ಠಾನದಲ್ಲಿ ಗುಣಮಟ್ಟ ಕಾಯ್ದುಕೊಳ್ಳುವ ನಿಬಂಧನೆಗೊಳಪಟ್ಟು ಬರಪೀಡಿತ ತಾಲ್ಲೂಕುಗಳು ಸೇರಿದಂತೆ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ತುರ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಬೇಕು. ಯಾವುದೇ ಕಾರಣಕ್ಕೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು PRI ಗಳಿಗೆ ಸಂಪೂರ್ಣ ಅಧಿಕಾರ ನೀಡಿದೆ.

2014–15ರ ಸಾಲಿನಲ್ಲಿ ಹಾಸನ ಜಿಲ್ಲೆಗೆ ರೂ. 77.59 ಕೋಟಿ ಅಂದಾಜು ಮೊತ್ತದ 3652 ಕುಡಿಯುವ ನೀರಿನ ಕಾಮಗಾರಿಗಳಿಗೆ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದನೆ ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಹಾಸನ ಜಿಲ್ಲೆಗೆ ರೂ. 41.52 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ವೈಕಿ ರೂ. 23.63 ಕೋಟಿ ಮಾತ್ರ ವೆಚ್ಚವಾಗಿರುತ್ತದೆ. ಸದರಿ ವಾರ್ಷಿಕ ಕ್ರಿಯಾ ಯೋಜನೆಯಡಿ ಚನ್ನರಾಯಪಟ್ಟಣ ತಾಲ್ಲೂಕಿನ ರೂ. 10.45 ಕೋಟಿ ಅಂದಾಜು ಮೊತ್ತದ 502 ಕುಡಿಯುವ ನೀರಿನ ಕಾಮಗಾರಿಗಳು, ಹೊಳೆನರಸೀಪುರ ತಾಲ್ಲೂಕಿನ ರೂ. 14.16 ಕೋಟಿ ಅಂದಾಜು ಮೊತ್ತದ 266 ಕುಡಿಯುವ ನೀರಿನ ಕಾಮಗಾರಿಗಳು ಮತ್ತು ಹಾಸನ ತಾಲ್ಲೂಕಿನ ರೂ. 8.71 ಕೋಟಿ ಅಂದಾಜು ಮೊತ್ತದ 566 ಕುಡಿಯುವ ನೀರಿನ ಕಾಮಗಾರಿಗಳು ಸೇರಿವೆ.

2014–15ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಬೇಲೂರು ಮತ್ತು ಅರಸೀಕೆರೆ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಿಲಾಗಿದ್ದು, ಸದರಿ ತಾಲ್ಲೂಕುಗಳಿಗೆ ತಲಾ ರೂ. 200.00 ಲಕ್ಷಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲಾಗಿದೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ಹೊಳೆನರಸೀಪುರ ಮತ್ತು ಹಾಸನ ತಾಲ್ಲೂಕುಗಳಲ್ಲಿನ ಸಮಸ್ಯಾತ್ಮಕ ಜನವಸತಿಗಳಲ್ಲಿ ಕುಡಿಯುವ ನೀರಿನ 353 ಕೊಳವೆ ಬಾವಿ ಕಾಮಗಾರಿಗಳಿಗಾಗಿ ರೂ. 317.70 ಲಕ್ಷಗಳಿಗೆ ಹಾಸನ ಜಿಲ್ಲಾ ಪಂಚಾಯತ್ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. <100% ಕವರೇಜ್ ವರ್ಗದಡಿ ಬರುವ ಜನವಸತಿಗಳನ್ನು NRDWPಯಡಿ Coverage & Quality ಘಟಕದಡಿ ಜಿಲ್ಲೆಗೆ ಲಭ್ಯವಾಗಿರುವ ಅನುದಾನದಿಂದ ಆವರಿಸಲು ಅವಕಾಶ ಕಲ್ಪಿಸಲಾಗುತ್ತಿದೆ. > 100% ಕವರೇಜ್ ವರ್ಗದಡಿ ಬರುವ ಜನವಸತಿಗಳನ್ನು ರಾಜ್ಯ ವಲಯದಡಿ ಪ್ರಸ್ತಾಪಿಸಿ ತುರ್ತು ಕ್ರಿಯಾ ಯೋಜನೆ ಕಳುಹಿಸಲು ಜಿಲ್ಲಾ ಪಂಚಾಯಿತಿಗಳಿಗೆ ಸೂಚಿಸಿದೆ. ಇದಕ್ಕೆ ಹೆಚ್ಚುವರಿ ಅನುದಾನ ನೀಡಲು ಅಥವಾ 2015–16ರ ಸಾಲಿನ ಕ್ರಿಯಾ ಯೋಜನೆಯಡಿ ಅಳವಡಿಸಲು ಕ್ರಮವಹಿಸಬೇಕಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣರವರಿಗೆ ಉತ್ತರವನ್ನು ಒದಗಿಸಿದ್ದೇವೆ. ಆದರೆ ಅವರು ಹೇಳುವ ಹಾಗೆ ಅವರು ನಮ್ಮ ಜೊತೆ ಈಗಾಗಲೇ ಎರಡು–ಮೂರು ಬಾರಿ ಚರ್ಚೆ ಮಾಡಿರುವಂತೆ 317 ಲಕ್ಷ ರೂಪಾಯಿಯ ಒಟ್ಟು ಯೋಜನೆಯನ್ನು ಬೇಗ ಅನುಷ್ಠಾನ ಆಗಬೇಕು, 2015–16ರ ಕ್ರಿಯಾ ಯೋಜನೆ ಅಡಿ ಮಾಡಿಸುತ್ತೇವೆ ಎನ್ನುವಂತಹ ಭರವಸೆಯನ್ನು ಕೊಟ್ಟಿದ್ದೇನೆ. ಆದರೆ ಅಲ್ಲಿರತಕ್ಕಂತಹ ನೀರಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅದು ಇದೇ ಆರ್ಥಿಕ ವರ್ಷದಲ್ಲಿ ಆದರೆ ಜನರಿಗೆ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ವಿವರವಾಗಿ ಎಲ್ಲಾ ಮಾಹಿತಿ ತರಿಸಿಕೊಂಡು ಆದಷ್ಟು ಬೇಗ ಇದೇ ಬೇಸಿಗೆಗೆ ನೀರು ಸಿಗುವ ಹಾಗೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಈ ವರ್ಷದಲ್ಲಿಯೇ ಮಾಡಬೇಕು. ಜನವರಿಯಿಂದ ಪ್ರಾರಂಭವಾಗಬೇಕು. ಪ್ರಪೋಸಲ್ ನಿಮ್ಮ RDPR-Principal Secretary ಹತ್ತಿರ ಇದೆ.

ಶ್ರೀ ಹೆಚ್.ಕೆ. ಪಾಟೀಲ್ : ಆದಷ್ಟು ಇದೇ ಬೇಸಿಗೆಯಲ್ಲಿ ನೀರು ಸಿಗುವ ಹಾಗೆ ಮಾಡುತ್ತೇವೆ.

16. ವಿಷಯ : ರಾಜ್ಯದಲ್ಲಿ ಜಿಲ್ಲಾ ಪಂಚಾಯತ್‌ಗಳ ಮೂಲಕ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದು, ಇದಕ್ಕೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದು, ಇದಕ್ಕೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ ಆಯಾ ಕ್ಷೇತ್ರದ ಶಾಸಕರ ಅನುಮೋದನೆಯನ್ನು ಪಡೆಯದೆ ಅನುದಾನವನ್ನು ದುರ್ಬಳಕೆ ಮಾಡುತ್ತಿರುವ ಬಗ್ಗೆ.

ಶ್ರೀಮತಿ ಶಾರದಾ ಪೂರ್ಯ ನಾಯಕ್ (ಶಿವಮೊಗ್ಗ ಗ್ರಾಮೀಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಂದ ಉತ್ತರ ಬಂದಿದೆ. ಆದರೆ ನಾನು ಒಂದು clarification ಕೇಳುತ್ತಿರುವುದು, NRDWP ಬಂದು 3–4 ವರ್ಷ ಆಯಿತು. ಅದಕ್ಕೆ ಸಂಬಂಧಪಟ್ಟ ಹಾಗೆ DWSM Committee ಯಲ್ಲಿ ಅದು scrutiny ಆಗಿ State Level Committee ಯಲ್ಲಿ ಅಪ್ರೂವಲ್ ಆಗಬೇಕಾಗಿತ್ತು. ಇದು ಯಾವುದೇ ಆಗದೇ ನೇರವಾಗಿ ಆಗುತ್ತಿರುವುದು ತಪ್ಪಾಗುತ್ತಿದೆ. ನಮ್ಮ ಹಕ್ಕುಗಳ ಚ್ಯುತಿ ಆಗುತ್ತಿದೆ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ (NRDWP) ಕೇಂದ್ರ ಮತ್ತು ರಾಜ್ಯಗಳ ಸಹಭಾಗಿತ್ವದ ಕಾರ್ಯಕ್ರಮವಾಗಿದ್ದು, ಸದರಿ ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಜನವಸತಿಗಳಿಗೆ ಸಮರ್ಪಕ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಧ್ಯೇಯ ಹೊಂದಿರುತ್ತದೆ. ಪ್ರತಿವರ್ಷ ನೀರಿನ ಇಳುವರಿ ಮತ್ತು ಕುಡಿಯುವ ನೀರಿನ ಜಲಮೂಲಗಳ